ಕಂ/ಉಪಲೋಕ್/ಬಿಜಿಎಂ/2579/2021
ಪಿ.ಓ.ಎ.ಆರ್.ಇ-5

# ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಬಿಜಿಎಂ/2579/2021
ಪಿಓ.ಎ.ಆರ್.ಇ-5(ಮಂಡನಾಧಿಕಾರಿಯವರ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10/01/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಶ್ರೀ. ಈರಪ್ಪ ಫಕೀರಪ್ಪ ಮೇಟಿ, ಬಿಲ್ ಕ್ಲರ್ಕ್ /ಅಕೌಂಟೆಂಟ್, ಗ್ರಾಮ ಪಂಚಾಯಿತಿ, ಫಕೀರ್‌ಬೂದಿಹಾಳ್, ತಾಲ್ಲೂಕು ಬದಾಮಿ, ಜಿಲ್ಲಾ ಬಾಗಲಕೋಟೆ, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ಬಾಗಲಕೋಟೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ. ಶ್ರೀ. ಶ್ರೀ. **ಈರಪ್ಪ ಫಕೀರಪ್ಪ ಮೇಟಿ, ಬಿಲ್ ಕ್ಲರ್ಕ್ / ಅಕೌಂಟೆಂಟ್, ಗ್ರಾಮ ಪಂಚಾಯಿತಿ, ಫಕೀರ್‌ಬೂದಿಹಾಳ್, ತಾಲ್ಲೂಕು ಬದಾಮಿ, ಜಿಲ್ಲಾ ಬಾಗಲಕೋಟೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ಮೇಲೆ **ಶ್ರೀ. ಮಾರುತಿ ಭೀಮಪ್ಪ ಲಮಾಣಿ, ಸಾ: ನರೇನೂರು, ಎಲ್.ಟಿ.ನಂ.2 ಗ್ರಾಮ, ತಾಲ್ಲೂಕು ಬದಾಮಿ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರ ಹೆಸರಿನಲ್ಲಿ ಫಕೀರ್ ಬೂದಿಹಾಳ್ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನರೇನೂರು ಗ್ರಾಮದಲ್ಲಿ ಆಸ್ತಿ ನಂ.20ರಲ್ಲಿಯ ಮನೆಯ ಪಶ್ಚಿಮ ಭಾಗದ ಅರ್ಧ ಭಾಗವನ್ನು ದೂರುದಾರರ ತಮ್ಮನ ಹೆಂಡತಿ ಕಸ್ತೂರಿಬಾಯಿ ಲಮಾಣಿ ಇವರ ಹೆಸರಿಗೆ ಹಕ್ಕುಪತ್ರ ಮಾಡಿ ಬಿಟ್ಟುಕೊಟ್ಟಿದ್ದು, ಹಕ್ಕುಪತ್ರದ ಪ್ರಕಾರ ಮನೆಯ ಅರ್ಧಭಾಗವನ್ನು ಕಸ್ತೂರಿಬಾಯಿ ಲಮಾಣಿ ಇವರ ಹೆಸರಿಗೆ ದಾಖಲು ಮಾಡಲು ದಿ: 13/09/2019 ರಂದು ಅರ್ಜಿ ಸಲ್ಲಿಸಿದ್ದು, ಅಂದೇ ದೂರುದಾರರ ಮನೆಯ ಹತ್ತಿರ ಸ್ಥಳ ಪರಿಶೀಲನೆಗೆ ಎದುರುದಾರರು ಬಂದು 10,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು, ಅದೇ ದಿನ ಮುಂಗಡವಾಗಿ 3,000/- ರೂ. ಪಡೆದುಕೊಂಡು, ಉಳಿದ ಹಣವನ್ನು ಸೋಮವಾರ ನೀಡುವಂತೆ ತಿಳಿಸಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಬಾಗಲಕೋಟೆ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 08/2019 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(a) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 7,000/- ಲಂಚವನ್ನು ಪಡೆದು ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ

ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಮಾರುತಿ ಭೀಮಪ್ಪ ಲಮಾಣಿ, ಸಾ: ನರೇನೂರು, ಎಲ್.ಟಿ.ನಂ.2 ಗ್ರಾಮ, ತಾಲ್ಲೂಕು ಬದಾಮಿ,** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರ ಹೆಸರಿನಲ್ಲಿ ಫಕೀರ್‌ಬೂದಿಹಾಳ್ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನರೇನೂರು ಗ್ರಾಮದಲ್ಲಿ ಆಸ್ತಿ ನಂ.20ರಲ್ಲಿಯ ಮನೆಯ ಪಶ್ಚಿಮ ಭಾಗದ ಅರ್ಧ ಭಾಗವನ್ನು ದೂರುದಾರರ ತಮ್ಮನ ಹೆಂಡತಿ ಕಸ್ತೂರಿಬಾಯಿ ಲಮಾಣಿ ಇವರ ಹೆಸರಿಗೆ ಹಕ್ಕುಪತ್ರ ಮಾಡಿ ಬಿಟ್ಟುಕೊಟ್ಟಿದ್ದು, ಹಕ್ಕುಪತ್ರದ ಪ್ರಕಾರ ಮನೆಯ ಅರ್ಧಭಾಗವನ್ನು ಕಸ್ತೂರಿಬಾಯಿ ಲಮಾಣಿ ಇವರ ಹೆಸರಿಗೆ ದಾಖಲು ಮಾಡಲು ದಿ: 13/09/2019 ರಂದು ಅರ್ಜಿ ಸಲ್ಲಿಸಿದ್ದು, ಅಂದೇ ಎದುರುದಾರರು ದೂರುದಾರರ ಮನೆಯ ಹತ್ತಿರ ಸ್ಥಳ ಪರಿಶೀಲನೆಗೆ ಬಂದು 10,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು, ಅದೇ ದಿನ ಮುಂಗಡವಾಗಿ 3,000/- ರೂ. ಪಡೆದುಕೊಂಡು ಉಳಿದ ಹಣ 7,000/- ರೂ.ಗಳನ್ನು ಸೋಮವಾರ ನೀಡುವಂತೆ ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 13/09/2019 ರಂದು ಬಾಗಲಕೋಟೆ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.08/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಮಹಮ್ಮದ್ ಮುಸ್ತಾಕಲ್ (ನೆರಳುಸಾಕ್ಷಿ) 2) ಶಿವಣ್ಣ ಹಿರೇಕುರುಬರ್ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಭಾಷಣೆಯನ್ನು ತನಿಖಾಧಿಕಾರಿಯವರು ಲಿಪಿಕರಿಸಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 7,000/- (500X14) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ನೋಟುಗಳ

ಎರಡೂ ಬದಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಶಿವಣ್ಣ ಹಿರೇಕುರುಬರ್ ಇವರ ಮೂಲಕ ದೂರುದಾರರ ಶರ್ಟಿನ ಜೇಬಿನಲ್ಲಿ ಇಡಿಸಿರುತ್ತಾರೆ. ಪಂಚಸಾಕ್ಷಿ-2 ಶಿವಣ್ಣ ಹಿರೇಕುರುಬರ್ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಕಡು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಮಹಮ್ಮದ್ ಮುಸ್ತಾಕ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರನ್ನು ಭೇಟಿಯಾದಾಗ ಮೊದಲು ಕೆಲಸದ ಬಗ್ಗೆ ವಿಚಾರಿಸಬೇಕು, ನಂತರ ಎದುರುದಾರರು ಲಂಚದ ಹಣವನ್ನು ಕೇಳಿದರೆ ಮಾತ್ರ ಕೊಡುವಂತೆ ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ ರೆಕಾರ್ಡರನ್ನು ನೀಡಿರುತ್ತಾರೆ. ಎದುರುದಾರರು ಹಣವನ್ನು ಪಡೆದುಕೊಂಡ ಮೇಲೆ ನಿಮ್ಮ ಮುಖದ ಮೇಲೆ ಕೈಯಾಡಿಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 16/09/2019 ರಂದು ಸಮಯ ಬೆಳಿಗ್ಗೆ 5.00 ರಿಂದ 7.00 ಘಂಟೆಯವರೆಗೆ ಬಾಗಲಕೋಟೆ ಎಸಿಬಿ ಠಾಣೆಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಬಾಗಲಕೋಟೆಯನ್ನು ಬೆಳಿಗ್ಗೆ 7.15ಕ್ಕೆ ಬಿಟ್ಟು 8.00 ಗಂಟೆಗೆ ಫಕೀರ್‌ಬೂದಿಹಾಳ್ ಗ್ರಾಮವನ್ನು ತಲುಪಿ, ವಾಹನವನ್ನು ಗ್ರಾಮಪಂಚಾಯಿತಿ ಕಚೇರಿಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿ ಮಹಮ್ಮದ್ ಮುಸ್ತಾಕ್ ಇವರನ್ನು ಗ್ರಾಮಪಂಚಾಯಿತಿ ಕಚೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಕಾರ್ಯಾಲಯದ ಹೊರಗಡೆ ಸಂಶಯಬರದಂತೆ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಸುಮಾರು ಬೆಳಿಗ್ಗೆ 8.35 ಗಂಟೆಗೆ ದೂರುದಾರರು ಸಂಜ್ಞೆ ನೀಡಿದ್ದು, ತಕ್ಷಣ ದಾಳಿತಂಡದವರು ದೂರುದಾರರು ಇದ್ದಲ್ಲಿಗೆ ಬಂದು ದೂರುದಾರರನ್ನು ವಿಚಾರಿಸಲಾಗಿ, ಕಚೇರಿಯ ಒಳಗೆ ಬಂದಾಗ ಎದುರುದಾರರು ಇಲ್ಲವಾದ್ದರಿಂದ ಫೋನ್ ಮಾಡಲಾಗಿ ಎದುರುದಾರರು ಬರುವುದಾಗಿ ತಿಳಿಸಿದ್ದು, ತಕ್ಷಣದಲ್ಲಿ ಬಂದು ದೂರುದಾರರಿಂದ ಹಣ ಪಡೆದುಕೊಂಡು, ಎರಡೂ ಕೈಗಳಿಂದ ಎಣಿಸಿ, ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. ಎದುರುದಾರರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್

ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣದ ಬಣ್ಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ, ಹಣವನ್ನು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಹಣವನ್ನು ಪಂಚ-1 ಮಹಮ್ಮದ್ ಮುಸ್ತಾಕರ ರವರು ತನಿಖಾಧಿಕಾರಿ ಸೂಚನೆ ಮೇರೆಗೆ ತೆಗೆದು ಈ ಮೊದಲು ಬರೆದುಕೊಂಡಿದ್ದ ನೋಟುಗಳ ನಂಬರುಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ಸರಿಹೊಂದಿದ್ದರಿಂದ, ತನಿಖಾಧಿಕಾರಿಗಳು ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ಕಡತದ ಬಗ್ಗೆ ಎದುರುದಾರರನ್ನು ವಿಚಾರಿಸಲಾಗಿ, ಅಲ್ಮೇರಾದಲ್ಲಿದ್ದ ಕಡತವನ್ನು ತೆಗೆದು ಹಾಜರುಪಡಿಸಿರುತ್ತಾರೆ. ಟ್ರ್ಯಾಪ್ ಸಮಯದಲ್ಲಿ ರೆಕಾರ್ಡ ಆದ ಸಂಭಾಷಣೆಯನ್ನು ಪ್ಲೇ ಮಾಡಿ ಪಂಚರಿಗೆ ಕೇಳಿಸಿ, ಅದನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರು ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು ಅದರಲ್ಲಿ ದಿ: 16/09/2018 ರಂದು ದೂರುದಾರರು ಮನೆ ಕಂದಾಯ ಹಾಗೂ ಹಕ್ಕು ಬದಲಾವಣೆ ಫೀ ಕಟ್ಟಲು ಬಂದಿದ್ದು, ತಾನು ಹಣವನ್ನು ಪಡೆದುಕೊಂಡು ರಶೀದಿ ಕೊಡುವಷ್ಟರಲ್ಲಿ ದಾಳಿತಂಡದವರು ಬಂದು ಹಿಡಿದುಕೊಂಡ ಬಗ್ಗೆ ಬರೆದು ಕೊಟ್ಟಿರುತ್ತಾರೆ. ಎದುರುದಾರರ ಸಮಜಾಯಿಷಿ ಬಗ್ಗೆ ದೂರುದಾರರು ಹಾಗೂ ನೆರಳುಸಾಕ್ಷಿಯನ್ನು ಕೇಳಲಾಗಿ, ಎದುರುದಾರರ ಸಮಜಾಯಿಷಿಯು ಸುಳ್ಳು ಇರುತ್ತದೆ ಎಂದು ನುಡಿದಿರುತ್ತಾರೆ. ಲಂಚ ಬೇಡಿಕೆಯ ಸಂಭಾಷಣೆಯ ಲಿಪಿಯನ್ನು ಮೂರು ಬಾರಿ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ಪ್ರಕಾರ ದೂರುದಾರರ ಮಾದರಿ ಧ್ವನಿಯನ್ನು ಸದರಿಯವರು ಓದಲು ಬರುವುದಿಲ್ಲ ಎಂದಿದ್ದರಿಂದ, ಅವರ ಹೆಸರು, ವಿಳಾಸ ಹೇಳಿಸುವ ಮೂಲಕ ಅವರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರ ಪ್ಯಾಂಟಿನ ಒಳಭಾಗದ ಜೇಬನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟ ಹಾಗೂ ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ಅವರ ಮೇಲಾಧಿಕಾರಿ ಅನಿತಾ ರಾಠೋಡ್ ಪ್ರಭಾರ ಪಿ.ಡಿ.ಓ. ಇವರಿಗೆ ಕೇಳಿಸಲಾಗಿ ಅದರಲ್ಲಿರುವ ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಅನಿತಾ ರಾಠೋಡ್ ರವರು ದೃಢೀಕರಿಸಿದ ಮೇರೆಗೆ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಹಾಜರಾತಿ ಪುಸ್ತಕದ ಸೆಪ್ಟೆಂಬರ್ ತಿಂಗಳ ಪುಟವನ್ನು ಹಾಗೂ ನಡವಳಿಕೆ ಪುಸ್ತಕದ ಪ್ರತಿಗಳನ್ನು ತಯಾರಿಸಿ, ಅವುಗಳನ್ನು ಅನಿತಾ ರಾಠೋಡ್‌ರವರು ದೃಢೀಕರಿಸಿದ ಮೇರೆಗೆ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಮೇಲ್ಕಂಡ ಪ್ರಕ್ರಿಯೆಗಳನ್ನು ಫಕೀರ್‌ಬೂದಿಹಾಳ್ ಗ್ರಾಮಪಂಚಾಯಿತಿ ಮೀಟಿಂಗ್

ಹಾಲ್ / ಸಿಬ್ಬಂದಿ ಕೊಠಡಿಯಲ್ಲಿ ಬೆಳಿಗ್ಗೆ 8.40 ರಿಂದ 12.15 ಗಂಟೆಯವರೆಗೆ ಬರೆದ ಮಹಜರಿನಲ್ಲಿ ದಾಖಲಿಸಿರುತ್ತಾರೆ.

ದಿ: 25/09/2019 ರಂದು ದೂರುದಾರರ ಪತ್ನಿ ರೇಣವ್ವ ಇವರು ಎಸಿಬಿ ಕಚೇರಿಯಲ್ಲಿ ಹಾಜರಿದ್ದು, ಪಂಚರ ಸಮಕ್ಷಮ ಸದರಿಯವರಿಂದ ಮೂರು ಬಾರಿ ಹೆಸರು, ವಿಳಾಸ ಹೇಳಿಸುವ ಮೂಲಕ ಅವರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯಲ್ಲಿಯ ಧ್ವನಿಯು ಎದುರುದಾರರದೆಂದು ಪ್ರಭಾರ ಪಿ.ಡಿ.ಒ. ಅನಿತಾ ರಾಠೋಡ್ ಗುರುತಿಸಿದ್ದಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನಾಗೊಳಿಸಲು ಮಂಜೂರಾತಿ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ಪಂಚಾಯತಿ ಬಿಲ್ ಕ್ಲರ್ಕ್ ಎಂದು ಫಕೀರಬೂದಿಹಾಳ್ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದು, ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸಂಬಂಧಿಸಿದಂತೆ ನಿವೇಶನಗಳು, ಮನೆಗಳು, ವಾಣಿಜ್ಯ ಮಳಿಗೆಗಳಿಗೆ ಪಂಚಾಯತಿಯವರು ನಿಗದಿಪಡಿಸಿದ ತೆರಿಗೆಯನ್ನು ವಸೂಲು ಮಾಡಿ, ಪಂಚಾಯತಿ ಖಾತೆಗೆ ಜಮಾ ಮಾಡುವುದು ನನ್ನ ಕರ್ತವ್ಯವಾಗಿರುತ್ತದೆ. ನಾನು ಸರ್ಕಾರಿ ನೌಕರನಾಗಿರುವುದಿಲ್ಲ. ದೂರುದಾರರ ಸಹೋದರನ ಹೆಂಡತಿ ಕಸ್ತೂರಿಬಾಯಿ ಲಮಾಣಿ ಇವರ ಹೆಸರಿಗೆ ಆಸ್ತಿ ನಂ: 20 ರಲ್ಲಿಯ ಮನೆಯ ಪಶ್ಚಿಮ ಭಾಗಕ್ಕಿರುವ ಅರ್ಧ ಮನೆಗೆ ಹೆಸರು ದಾಖಲು ಮಾಡಲು ತಾನು ರೂ. 10,000/- ಲಂಚಕ್ಕೆ ಬೇಡಿಕೆ ಇಟ್ಟು, ರೂ. 3,000/- ಮುಂಗಡವಾಗಿ ಪಡೆದಿರುತ್ತೇನೆ ಎನ್ನುವುದು ಮತ್ತು ಸದರಿ ಸಂಭಾಷಣೆಯನ್ನು ದೂರುದಾರರು ರೆಕಾರ್ಡ್ ಮಾಡಿಕೊಂಡಿರುತ್ತಾರೆ ಎನ್ನುವುದು ಸತ್ಯಕ್ಕೆ ದೂರವಾಗಿರುತ್ತದೆ. ತಾನು ಯಾವುದೇ ಸಂಭಾಷಣೆ ಮಾಡಿರುವುದಿಲ್ಲ. ಮನೆಗಳಿಗೆ ಹೆಸರನ್ನು ದಾಖಲು ಮಾಡುವುದು ತನ್ನ ಕರ್ತವ್ಯವಾಗಿರುವುದಿಲ್ಲ. ಸಂಭಾಷಣೆಯಲ್ಲಿರುವ ಧ್ವನಿಯು ನನ್ನದಲ್ಲ. ದಿ: 16-09-2019 ರಂದು ದೂರುದಾರರು ಮನೆ ಕಂದಾಯ ಕಟ್ಟಲು ಬಂದಿದ್ದು, ನಾನು ಹಣ

ಪಡೆದುಕೊಂಡು ರಶೀದಿ ನೀಡಬೇಕೆನ್ನುವಷ್ಟರಲ್ಲಿ ದಾಳಿತಂಡದವರು ಬಂದು ಏನು ತಿಳಿಸದೇ ಹಣವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ದೂರುದಾರರಿಂದ ಯಾವುದೇ ಲಂಚದ ಹಣ ಪಡೆದುಕೊಂಡಿರುವುದಿಲ್ಲ. ಕಾರಣ ತನ್ನ ಮೇಲಿನ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಾದಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಯಾವುದೇ ಆಧಾರಗಳು ಇರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

5. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

13/1/22

(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.